ಸೌರ ವಿದ್ಯುತ್ ಘಟಕ ಸ್ಥಾಪನೆ

700(1299); ಶ್ರೀ ಕ್ಯಾತಸಂದ್ರ ಎನ್. ರಾಜಣ್ಣ (ಮಧುಗಿರಿ)

ಅ) ರಾಜ್ಯದಲ್ಲಿ ಸೌರ ವಿದ್ಯುತ್ ಘಟಕ ಸ್ಥಾಪಿಸಲು ಉದ್ದೇಶಿಸಿರುವ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ; ಎಲ್ಲೆಲ್ಲಿ ಇಂತಹ ಘಟಕಗಳನ್ನು ಸ್ಥಾಪಿಸಲುದ್ದೇಶಿಸಲಾಗಿದೆ; (ಜಿಲ್ಲಾವಾರು, ತಾಲ್ಲೂಕುವಾರು ಮಾಹಿತಿ ನೀಡುವುದು);

ಆ) ಹಾಗಾದರೆ, ಸರ್ಕಾರ ಸೌರ ಉದ್ಪಾದನಾ ಘಟಕಗಳಿಗೆ ವಿಶೇಷ ಸೌಲಭ್ಯಗಳನ್ನು ವಿನಾಯಿತಿಗಳನ್ನು ನೀಡಿದೆಯೇ; (ಮಾಹಿತಿ ನೀಡುವುದು);

ಇ) ಇದು ಯಾವ ಅವಧಿಯವರೆಗೂ ಚಾಲ್ತಿಯಲ್ಲಿರುತ್ತದೆ; ಇದಕ್ಕೆ ವಿಧಿಸಿರುವ ಮಾನದಂಡಗಳೇನು; ವಿನಾಯಿತಿಯನ್ನು ಎಷ್ಟು ಪ್ರಮಾಣದಲ್ಲಿ ನೀಡಲಾಗುವುದು; (ವಿವರ ನೀಡುವುದು);

ಶ್ರೀ ಡಿ.ಕೆ. ಶಿವಕುಮಾರ್ (ಇಂಧನ ಸಚಿವರು)

ಅ) ಹೌದು.

ರಾಜ್ಯದಲ್ಲಿ ಸೌರ ವಿದ್ಯುತ್ ಘಟಕ ಸ್ಥಾಪಿಸಲು ತಾತ್ಕಾಲಿಕವಾಗಿ ಉದ್ದೇಶಿಸಿರುವ ಸೌರ ವಿದ್ಯುತ್ ಘಟಕಗಳ ಜಿಲ್ಲಾವಾರು, ತಾಲ್ಲೂಕುವಾರು ವಿವರ ಕೆಳಕಂಡಂತಿದೆ:

Sl.No.	District	Taluk	Capacity in MW
1	Chitradurga	Challakere	195
		Molakamuru	17
		Hiriyur	200
2	Bidar	Humnabad	19
		Aurad	4
3	Bijapur	Indi	10
4	Chikballapur	Bagepalli	5

5	Haveri	Kaginele	5
6	Kolar	Mulabagal	6
7	Koppal	Yelburga	13
		Kusthagi	100
8	Tumkur	Pavgada	96
		Sira	15
		Madhugir	10

ಆ) ಮತ್ತು ಇ) ಸೌರ ಯೋಜನೆಗಳನ್ನು ಸ್ಥಾಪಿಸಲು ಭೂ ಸುಧಾರಣೆ ಕಾಯ್ದೆ 109 ರನ್ವಯ ಭೂಮಿಗೆ ಡೀಮ್ಡ್ ಕನ್ವರ್ಷನ್ ಸೌಲಭ್ಯವನ್ನು ಒದಗಿಸಲು ಉದ್ದೇಶಿಸಿದೆ ಮತ್ತು ಕೇಂದ್ರ ಸರ್ಕಾರದ excise ಸುಂಕ ಮತ್ತು customs ಸುಂಕ ವಿನಾಯಿತಿ ಲಭ್ಯವಿದೆ. ಕರ್ನಾಟಕ ಕೈಗಾರಿಕಾ ನೀತಿಯಲ್ಲಿ ಲಭ್ಯವಿರುವ ವಿನಾಯಿತಿಗಳನ್ನು ಸೌರ ಯೋಜನಾ ಅಭಿವೃದ್ಧಿದಾರರು ಪಡೆಯಲು ಅವಕಾಶವಿದೆ.

ಬೃಂದಾವನ ಗಾರ್ಡನ್ಸ್, ಮೈಸೂರು ಇದರ ನಿರ್ವಹಣೆ

701(1321); ಶ್ರೀ ಲೋಬೋ ಜೆ.ಆರ್. (ಮಂಗಳೂರು ನಗರ ದಕ್ಷಿಣ)

ಅ) ಮೈಸೂರಿನ ಬೃಂದಾವನ ಗಾರ್ಡನ್ಸನ್ನು ಯಾರು ನಿರ್ವಹಣೆ ಮಾಡುತ್ತಿದ್ದಾರೆ; ಯಾರು ಅಭಿವೃದ್ಧಿ ಕಾಮಗಾರಿಗಳನ್ನು ಮಾಡುತ್ತಿದ್ದಾರೆ;

ಆ) ಈ ಬೃಂದಾವನ ಗಾರ್ಡನ್ಸನ ಪ್ರವೇಶ ಶುಲ್ಕವನ್ನು ಯಾರು ವಸೂಲಾತಿ ಮಾಡುತ್ತಿದ್ದಾರೆ; 2012–13, 2013–14 ಮತ್ತು 2014–15ನೇ ಸಾಲಿನಲ್ಲಿ ಪ್ರವೇಶ ಶುಲ್ಕ ಮತ್ತು ಇತರ ಆದಾಯಗಳು ಎಷ್ಟು ಬಂದಿದೆ;

ಇ) ಬೃಂದಾವನ ಗಾರ್ಡನ್ಸನ ನಿರ್ವಹಣೆಗೆ ಮತ್ತು ಅಭಿವೃದ್ಧಿ ಕಾಮಗಾರಿಗೆ ಕಳೆದ 3 ವರ್ಷಗಳಲ್ಲಿ ಖರ್ಚು ಮಾಡಿರುವ ಮೊತ್ತ ಎಷ್ಟು?